<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರು.</u>

ಅಸಲು ದಾವೆ ನಂ.236/2021

ಪಿಡಬ್ಲ್ಯೂ : 02
ದಿನಾಂಕಃ 19.04.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಲತಾ ಎ ಸಿ |
| ಗಂಡನ ಹೆಸರು | - ಗಿರೀಶ ಸಿ ಬಿ |
| ವಯಸ್ಸು | - 32 ವರ್ಷ |
| ಉದ್ಯೋಗ | - ತಾಲೂಕಾ ಸರ್ವೆಯರ್ |
| ವಾಸ ಸ್ಥಳ | - ಭದ್ರಾವತಿ |

<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್ ಎಸ್ ಕೆ ವಕೀಲರಿಂದ</u>

2013 ರಿಂದ 2018 ರವರೆಗೆ ಸವಣೂರಿನಲ್ಲಿ ತಹಶೀಲ್ದಾರ ಕಚೇರಿಯಲ್ಲಿ ತಾಲೂಕಾ ಭೂ ಮಾಪನ ಅಧಿಕಾರಿ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ವಾದಿ ಈರವ್ವ ಜಮೀನು ಸರ್ವೆ ನಂ.15/4 ಮಾವೂರು ಗ್ರಾಮದ ಜಮೀನನ್ನು ಸರ್ವೆ ಮಾಡಲು ಅರ್ಜಿ ಕೊಟ್ಟಿದ್ದರು. ಸದರಿ ಅರ್ಜಿಯನ್ನು ನನಗೆ ಅಳತೆ ಮಾಡಲು ನಮ್ಮ ಇಲಾಖೆಯಿಂದ ವಹಿಸಿದ್ದರು. ನಾನು ಅರ್ಜಿದಾರರಿಗೆ ಮತ್ತು ಸದರಿ ಜಮೀನು ಸರ್ವೆ ನಂ.15/4 ಇದರ ಚಕಬಂದಿಯಲ್ಲಿ ಬರುವ ಲಾಗುದಾರರಿಗೆ ನೋಟಿಸನ್ನು ನೀಡಿರುತ್ತೇನೆ. ದಿನಾಂಕಃ 15.12.2016 ರಂದು ಅಳತೆಗಾಗಿ ನಿಗದಿಪಡಿಸಿ 7 ದಿನ ಮುಂಚಿತವಾಗಿ ನೋಟಿಸನ್ನು ನೀಡಿದ್ದೇನೆ. ದಿನಾಂಕಃ 15.12.2016 ರಂದು ನಾನು ಮತ್ತು ನನ್ನ ಅಸಿಸ್ಟೆಂಟ್ ಅರ್ಜಿದಾರರು ಮತ್ತು ಸದರಿ ಸರ್ವೆ ನಂಬರಿನ ಸುತ್ತಮುತ್ತಲಿನ ಲಾಗುದಾರರ ಸಮಕ್ಷಮ ಅಳತೆ ಮಾಡಿರುತ್ತೇನೆ. ಸದರಿ ಅರ್ಜಿದಾರರ ಮತ್ತು ಸುತ್ತಮುತ್ತಲಿನ ಲಾಗುದಾರರು (ಸಾಗುವಳಿದಾರರು) ಸಹಿಗಳನ್ನು ಪಡೆದುಕೊಂಡಿರುತ್ತೇನೆ. ಅಳತೆ ಮಾಡಿದ ನಂತರ ನನಗೆ ಸರ್ವೆ ನಂ.15 ರ ಹಿಸ್ಸಾ ನಂ.4 ರಲ್ಲಿ ಸರ್ವೆ ನಂ.15 ರ ಹಿಸ್ಸಾ ನಂ.3 ನೇ ಸಾಗುವಳಿದಾರರು 6 ಗುಂಟೆ ಜಮೀನನ್ನು ಒತ್ತುವರಿ ಮಾಡಿರುವುದು ಕಂಡು ಬಂದಿರುತ್ತದೆ. ಆ ಕುರಿತು ತದನಂತರ ಪಿ ಟಿ ಶೀಟು ತಯಾರಿಸಿರುತ್ತೇನೆ, ಮತ್ತು ವರದಿ ಸಲ್ಲಿಸಿರುತ್ತೇನೆ.

ಈಗ ನಾನು ನೋಡುತ್ತಿರುವ ಪಿ ಟಿ ಶೀಟು ನಾನು ತಯಾರಿಸಿದ ಪಿ ಟಿ ಶೀಟು ಆಗಿರುತ್ತದೆ, ಅದನ್ನು ಈಗಾಗಲೇ ನಿಪಿ-2 ಅಂತಾ ಗುರುತಿಸಿದ್ದು ಅದರಲ್ಲಿ ಕೆಂಪು ಬಣ್ಣದಿಂದ

ಗುರುತಿಸಿದ ಮತ್ತು 4 ಅಂತಾ ಬರೆದ ಜಮೀನು ಒತ್ತುವರಿ ಮಾಡಿದ ಜಮೀನಾಗಿರುತ್ತದೆ. ನಾನು ತಯಾರಿಸಿದ ಪಿ ಟಿ ಶೀಟು ಕಚೇರಿಯಲ್ಲಿರುತ್ತದೆ. ನಿಪಿ-2 ಅದರ ದೃಡಿಕೃತ ಪ್ರತಿ ಆಗಿರುತ್ತದೆ.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ ಬಿ ಟಿ ವಕೀಲರಿಂದ**

ಸರ್ವೆ ನಂ.15 ರಲ್ಲಿ 10 ಹಿಸ್ಸೆಗಳು ಇರುತ್ತವೆ. ಎಲ್ಲಾ ಹಿಸ್ಸೆಗಳನ್ನು ಅಳತೆ ಮಾಡಿರುತ್ತೇವೆ ಮೊದಲು ಸರ್ವೆ ನಂ.15 ರ ಮೂಲ ಕಲ್ಲನ್ನು ಕಂಡು ಹಿಡಿದು ನಂತರ ಅಲ್ಲಿಂದ ಎಲ್ಲಾ ಹಿಸ್ಸೆಗಳನ್ನು ಅಳತೆ ಮಾಡುತ್ತಾ ಹೋಗಿರುತ್ತೇವೆ. ನೋಟಿಸನ್ನು 10 ಹಿಸ್ಸಾದಾರರಿಗೆ ಕೊಟ್ಟಿಲ್ಲ ಕೇವಲ ಸರ್ವೆ ನಂ.15/4 ರ ಚಕಬಂದಿಯಲ್ಲಿ ಬರುವ ಸಾಗುವಳಿದಾರರಿಗೆ ಮಾತ್ರ ನೋಟಿಸು ಕೊಟ್ಟಿರುತ್ತೇವೆ. ನಾವು ಅಳತೆ ಮಾಡಿಕೊಂಡು ಬಂದ ಸ್ಥಳದಿಂದ ಬಾಂಡಗಲ್ಲು (ಹದ್ದಬಸ್ತು ಕಲ್ಲು) ಇರುತ್ತದೆ. ಸರ್ವೆ ನಂ.15 ರ ಪೂರ್ವಕ್ಕೆ ರಸ್ತೆ ಇರುತ್ತದೆ. ಸದರಿ ರಸ್ತೆ ಸರ್ವೆ ನಂ.15 ರ ಒಳಗಡೆ ಹೋಗಿಲ್ಲ. ಸದರಿ ಪೂರ್ವದ ರಸ್ತೆ ಸರ್ವೆ ನಂ.15 ರ ಒಂದು ಭಾಗ ಎಂದರೆ ಸರಿಯಲ್ಲ. ಪಾಲಿನಿ ಪದ್ದತಿ ಪ್ರಕಾರ ಅಳತೆ ಮಾಡಿರುತ್ತೇವೆ. ಪಾಲಿನಿ ಪದ್ದತಿ ಪ್ರಕಾರ ಪೂರ್ವ ಪಶ್ಚಿಮ ಎಷ್ಟು ಚೈನ ಇರುತ್ತದೆ ಎಂದರೆ ಸರ್ವೆ ನಂ.15/4 ರ ಜಮೀನಿನ ಪೂರ್ವದಿಂದ ಪಶ್ಚಿಮಕ್ಕೆ 16 ಚೈನ 8 ಲಿಂಕ್ ಇರುತ್ತದೆ. ಒಂದು ಚೈನ 33 ಪೂಟು ಇರುತ್ತದೆ. ಜಮೀನಿನ 33.5 ಚೈನ ಪಶ್ಚಿಮದ ಕಡೆಗೆ ಮತ್ತು 35 ಚೈನ ಪೂರ್ವದ ಕಡೆಗೆ ಇರುತ್ತದೆ. ಪೂರ್ವಕ್ಕೆ ಜಾಸ್ತಿ ಪಶ್ಚಿಮಕ್ಕೆ ಕಡಿಮೆ ಇರುತ್ತದೆ. ನಾನು ಸರ್ವೆ ನಂ.15 ಎಲ್ಲಾ ಹಿಸ್ಸೆಗಳನ್ನು ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ, ನಾನು ಕ್ರಮಬದ್ಧವಾಗಿ ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಯರ ಸಮಕ್ಷಮ ಅಳತೆ ಮಾಡಿಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು. ಸವಣೂರು.